ದಿನಾಂಕ 10-01-2025 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆ : ಅರ್ಜಿದಾರರ ಪರ ಶೀ.ಎಂ ಸಿ ಎಂ ವಕೀಲರಿಂದ

ನಾನು ಈ ಪ್ರಕರಣದ ಅರ್ಜಿದಾರನಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ನನಗೆ ತಿಳಿದಿವೆ ಮತ್ತು ಸತ್ಯವಾಗಿವೆ.

ನಾನು ಅಸಲು ದಾವಾ ಸಂಖ್ಯೆ 78/2021 ರ ತೀರ್ಪು ಮತ್ತು ಡಿಕ್ರಿ ಪ್ರತಿಯನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-1 ಮತ್ತು 2 ಎಂದು ಗುರುತಿಸಲಾಯಿತು. ಅಸಲು ದಾವಾ ಸಂಖ್ಯೆ 78/2021 ರ ಸಂಪೂರ್ಣ ಆದೇಶದ ಹಾಳೆಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನನ್ನ ತಂದೆಯವರು ಕೋವಿಡ್-2019 ಕ್ಕೆ ಒಳಗಾದ ಬಗ್ಗೆ ಹುಬ್ಬಳ್ಳಿ ಕಿಮ್ಸ ಆಸ್ಪತ್ರೆಯಲ್ಲಿರು ತುರ್ತು ಚಿಕಿತ್ಸಾ ವಿಭಾಗಕ್ಕೆ ಕಳುಹಿಸಿಕೊಟ್ಟ ಬಗ್ಗೆ ನೀಡಲಾದ ಪತ್ರವನ್ನು ಹಾಜರು ಪಡಿಸಿದ್ದ ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ನನ್ನ ತಂದೆಗೆ ಸಂಬಂಧಪಟ್ಟ ದಿನಾಂಕ 05.01.2023 ರ ಸಿ ಟಿ ಸ್ಕ್ಯಾನಿಂಗ್ ವರದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-5 ಎಂದು, ನನ್ನ ತಂದೆಗೆ ಸಂಬಂಧಪಟ್ಟ ದಿನಾಂಕ 11.01.2024 ರ ಎಂ ಆರ್ ಐ ಸ್ಕ್ಯಾನಿಂಗ್ ವರದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-6 ಎಂದು, ನನ್ನ ತಂದೆಗೆ ಸಂಬಂಧಪಟ್ಟಂತೆ ಕೋವಿಡ್ ಇರುವ ಬಗ್ಗೆ ದಿನಾಂಕ 04.05.2021 ರ ಡೈಗ್ನೋಸ್ಟಿಕ್ ವರದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-7 ಎಂದು, ನನ್ನ ತಂದೆ ದಿನಾಂಕ 13.01.2024 ರಂದು ಮೃತ ಪಟ್ಟ ಬಗ್ಗೆ ಮರಣ ಉತಾರನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

: ಪಾಟೀ ಸವಾಲು : ಎದುರುದಾರ ಪರ ಶ್ರೀ.ಎಸ್ ವಿ ಎಂ ವಕೀಲರಿಂದ:

ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್